# ನಕ್ಷತ್ರ ಚುಕ್ಕಿಗಳ ಛಂದಸ್ಸಿನ ಚಂದ್ರಮ

ವಿಸ್ತಾರವಾದ ಸುಖದ ಆಯಾಸದಲ್ಲಿ ಸಹ್ಯಾದ್ರಿಯಿಂದ ಜಿಗಿದು ಲವಲವಿಕೆಯ ಜೀವನದಿ ಚೆಲುವೆ ಶರಾವತಿ ಗರತಿಯಾಗಿ ಸಮುದ್ರ ಸೇರುವಲ್ಲಿ ವಿದಾಯ ಹೇಳಲು ನಿಂತ ಕಾಸರಗೋಡು ಎಂಬ ಪುಟ್ಟ ಊರಿದೆ. ತೆರೆಗಳ ಉಸಿರಿಗೆ ಶೃತಿ ಹಿಡಿದು ಸುಂಯ್‌ಗುಡುವ ಗಾಳಿ ಮರಗಳು ಒಂದೆಡೆಯಾದರೆ ನದಿ ತೀರದುದ್ದಕ್ಕೆ ರಾತ್ರಿಯಿಡೀ ಸಮುದ್ರ ನೀರಿನಲ್ಲಿ ಸಂಚರಿಸಿ ಬಣ್ಣದ ಪತಾಕೆ ಸಹಿತ, ಸುಗ್ಗಿ ಕುಣಿದ ಕಲಾವಿದರಂತೆ ನಿದ್ದೆ ಹೋದ ಸಾಲು ದೋಣಿಗಳು ಮತ್ತೊಂದೆಡೆ. ನಡುವೆ ಮೋಡಗಳನ್ನು ಗುಡಿಸುತ್ತ ನಿಂತ ತೆಂಗಿನ ಮರಗಳಿಂದ ಉರುಳಿದ ನೆರಳಲ್ಲಿ ಕುಸುಮಾ ಸೊರಬ ಅವರ ಆಯುರ್ವೇದದ ಬಿಳಿ ಶುಭ್ರ ದಾದಿಯಂತಹ ಪ್ರೇಮಮಯಿ ಆಸ್ಪತ್ರೆ. ವೃತ್ತಿಯಿಂದ ವೈದ್ಯೆಯಾಗಿದ್ದ ಅವರು ಪರಿಸರ, ಸಾಹಿತ್ಯದ ಹುಚ್ಚು ಹಿಡಿಸಿಕೊಂಡು ಆಶ್ರಮದಂತೆ ಕಾಣುವ ಸ್ನೇಹ ಕುಂಜದಲ್ಲಿ ಸದಾ ಲವಲವಿಕೆಯಿಂದ ಸುತ್ತಲಿನ ಹೊಸ ಬೆಳಕು ಗಾಳಿಯನ್ನು ಬರಮಾಡಿಕೊಳ್ಳಲು ದೇಸಿ ಚಿಂತನೆಯ ಕಿಟಕಿಯನ್ನು ತೆರೆದಿಟ್ಟವ್ರರು.

ಸುಮಾರು ಹತ್ತು ವರ್ಷಗಳ ಹಿಂದಿನ ಮಾತು. ಕನ್ನಡ ಪುಸ್ತಕ ಪ್ರಾಧಿಕಾರದವರು ಸ್ನೇಹಕುಂಜದಲ್ಲಿ ಎರಡು ದಿನಗಳ ಶಿಬಿರ ಏರ್ಪಡಿಸಿದ್ದರು. ರಾಜ್ಯದ ವಿವಿಧ ಕಡೆಯಿಂದ ಸಾಹಿತಿಗಳು, ಪ್ರಕಾಶಕರು, ವಿಮರ್ಶಕರು, ಓದುಗರು ಅದರಲ್ಲಿ ಭಾಗವಹಿಸಿದ್ದರು. ಮೊದಲ ದಿನದ ಗೋಷ್ಠಿಯೊಂದರಲ್ಲಿ ರಾಘವೇಂದ್ರ ಪಾಟೀಲರೊಂದಿಗೆ ನಾನು ಭಾಗವಹಿಸಿದ್ದೆ. ಅದೇ ಪ್ರಥಮ ಭೇಟಿ. ಜಾಕಿಟು ಧರಿಸಿದ ಅವರ ಹೆಗಲಿಗೆ ಖಾದಿ ಜೋಳಿಗೆ ಜೋತು ಬಿದ್ದಿತ್ತು. ತುಸು ಬೋಳಾಗಿ ಕಾಣುತ್ತಿದ್ದ ಹಣೆಯ ಮೇಲೆ ಒಂದೆರಡು ಮುಂಗುರುಳುಗಳು ಓಲಾಡುತ್ತಿದ್ದವು.ಕರಾವಳಿಯ ಸೆಖೆಗೆ ಬೆವೆತು ಅಕ್ಷರಶ: ಹಣ್ಣಾಗಿದ್ದರು. ವೇದಿಕೆಯ ಮುಂದೆ ಎದುರಾದವರೆ, “ನಾನು ರಾಘವೇಂದ್ರ ಪಾಟೀಲ ಅಂತ. ಮಲ್ಲಾಡಿ ಹಳ್ಳಿಯಿಂದ ಬಂದಿದ್ದೀನಿ” ಎಂದರು.ಜೋಳಿಗೆಯಿಂದ ಕಥಾ ಸಂಕಲನ ‘ಮಾಯಿಯ ಮೂಖಗಳು’ ಹೊರ ತೆಗೆದು, ಕಪ್ಪು ಶಾಯಿಯಲ್ಲಿ ಮುದ್ದಾಗಿ ಸಹಿ ಹಾಕಿ ನನಗೆ ನೀಡಿದರು.ಅವರ ಪರಿಚಯದ ವಿನಯಪೂರ್ಣ ಮಾತಿನಲ್ಲಿ ಕ್ಷಣಕಾಲ ಕಡಲ ಪಿಸುಗಡುವ ತಂಗಾಳಿ ಸೂಸಿ ಹಿತವೆನಿಸಿ ನಿಂತೆ. ಗಾಢವಾಗಿ ಕಾಡಿ ಗುಂಗು ಹಿಡಿಸಿದ ‘ಒಡಪುಗಳು‘ ‘ಪ್ರತಿಮೆಗಳು’ ‘ದೇಸಗತಿ’ ಕತೆಗಳಲ್ಲಿ ಕೇಳಿದ್ದ ವಕ್ರ ಸುಳಿಯ ಆಡು ನುಡಿಗಟ್ಟು ಮತ್ತು ನಾದ ಪೂರ್ಣ ಲಯಕ್ಕೂ ಅವರ ಭೇಟಿಯ ಕ್ಷಣದಲ್ಲಿ ಮತ್ತು ಗೋಷ್ಠಿಯಲ್ಲಿ ಆವಾಹಿಸಿಕೊಂಡು ಆಡಿದ ಪರಿಷ್ಕೃತ ಛಂದಸ್ಸಿನ ಗದ್ಯಗಂಧಿ ಗ್ರಾಂಥಿಕ ಅಚ್ಚಿನಲ್ಲಿ ಎರಕ ಹೊಯ್ದ ಮಾಟದ ಮಾತಿಗೂ ವ್ಯತ್ಯಾಸವಿರುವುದು ಗಮನಕ್ಕೆ ಬಂದು ಸ್ವಲ್ಪ ಕಾಲ ಸೋಜಿಗವಾಯಿತು.

ಅಂದು ನನ್ನೊಂದಿಗೆ ಪಾಟೀಲರು ದಿನವಿಡೀ ಇದ್ದು ಆಶ್ರಮದ ಮರ. ಭೋರ್ಗರೆಯುತ್ತಿದ್ದ ಕಡಲು, ಹರಿವ ನದಿ, ಆಸ್ಪತ್ರೆಯ ಪರಿಚಾರಕರು, ಪಕ್ಕದ ರಾಷ್ಟ್ರೀಯ ಹೆದ್ದಾರಿಯೊಂದಿಗೆ ಮಾತಾಡುತ್ತಿರುವ ಸಂತನಂತೆ ನನಗೆ ಭಾಸವಾದರು. ಕುಸುಮ ಸೊರಬರವರ ಪರಿಸರ ಕಾಳಜಿ, ಒಂದು ಕಾಲದ ಹೊನ್ನಾವರದ ವ್ಯಾಪಾರದ ಬಂದರು, ದೀಪದ ಗೋಪುರ ಕುರಿತು ಕೇಳಿದರು. ಸ್ಥಳೀಯ ಮಹಾತ್ಮೆಯ ಬಗ್ಗೆ ಅವರಿಗೆ ಕಥೆಗಾರನೊಬ್ಬನಿಗೆ ಸಹಜವಾಗಿರುವ ಕುತೂಹಲ ಕಂಡು ನಾನೂ ಪ್ರಚೋದಿತನಾಗಿ ನನಗೆ ತಿಳಿದ ಸಂಗತಿಗಳನ್ನು ವಿವರಿಸಿದೆ. ಸ್ವಾತಂತ್ರ್ಯ ಪೂರ್ವದಲ್ಲಿ ಹೊನ್ನಾವರ ಹಲವು ಸಾಮ್ರಾಜ್ಯಶಾಹಿ ರಾಷ್ಟ್ರಗಳ, ಸ್ಥಳೀಯ ರಾಜರ ವ್ಯಾಪಾರ ಮತ್ತು ಕಾಳಗದ ಕೇಂದ್ರವಾಗಿದ್ದದ್ದು, ಭೂ ಮತ್ತು ಸಾಗರ ಮಾರ್ಗಗಳು ಯುದ್ಧ ಮತ್ತು ವ್ಯಾಪಾರಕ್ಕೋಸ್ಕರ ನಿರ್ಮಾಣವಾದದ್ದು, ಕಾಳು ಮೆಣಸಿನ ಕಣಜವಾಗಿ ಜಿಲ್ಲಾ ಕೇಂದ್ರವಾಗಿದ್ದದ್ದು, ಗಂಧದ ಮರದ ಕುಸುರಿ ಕೆತ್ತನೆಗೆ, ಲೋಹದ ಮೂರ್ತಿಗಳನ್ನು ಎರಕ ಹೊಯ್ದು ತಯಾರಿಸಿ ಪರದೇಶಗಳಿಗೆ ರಫ್ತು ಮಾಡುತ್ತಿದ್ದದ್ದು,ಅಸಾಧಾರಣ ಸೌಂದರ್ಯ ಸಂವೇದನೆಯ ದರ್ಜೆಯ ಮನೆತನಗಳಿಗೆ ಪ್ರಸಿದ್ಧಿಯಾದದ್ದು ನಿರೂಪಿಸಿದೆ. ಹೊನ್ನಾವರ ತೀರದ ಆಳದಲ್ಲಿ ಮುಳುಗಿಹೋದ ಟೈಟನಿಕ್‌ನಂಥ ಯುದ್ಧ ಹಡಗುಗಳ

ಅವಶೇಷಗಳು ಹುಡುಕಿದರೆ ಸಿಗಬಹುದು ಎಂದೆ. ಅವರು ಮಗುವಿನ ಮುಗ್ಧತೆಯಿಂದ ಆ ರೋಚಕ ಇತಿಹಾಸದ ಪ್ರಸಂಗವನ್ನು ಬೆರಗಿನಲ್ಲಿ ಕಲ್ಪಿಸಿಕೊಳ್ಳುತ್ತ ಅಂತರ್ಮುಖಿಯಾದರು. ಗೋಷ್ಠಿಯಲ್ಲಿ ಚರ್ಚಿಸಬೇಕಾದ ವಿಷಯದ ಕುರಿತಾಗಿ ಅವರಿಗಿರುವ ಕಾಳಜಿಯಷ್ಟೇ ತೀವ್ರವಾದ ಕಳಕಳಿ ಸ್ಥಳೀಯ ಸಂಸ್ಕೃತಿಯ ಸಮುಚ್ಚಯದ ಬಗ್ಗೆ ಇತ್ತು. ಭೌಗೋಳಿಕ ಪರಿಸರ, ಅಲ್ಲಿ ವಾಸಿಸುವವರ ಕುಚ್ಚಲಕ್ಕಿ ಗಂಜಿ–ಹುರಿದ ಮೀನಿನ ಆಹಾರ, ತುಂಡು ಪಂಚೆಯ ಒದ್ದೆ ಉಡುಪಿನ ಕಷ್ಟ ಸಹಿಷ್ಣು ಜೀವನಶೈಲಿ, ಭಾಷಾ ವೈಚಿತ್ರ್ಯ ಮುಂತಾದವುಗಳನ್ನು ಬಿಡಿಬಿಡಿಯಾಗಿ ನೋಡದೆ  ಅವೆಲ್ಲವುಗಳನ್ನೂ ಅಂತರ್‌ಪಠ್ಯದ ಅಖಂಡ ಅನುಭವವಾಗಿ ಅವರ ವಿಶಿಷ್ಟ ಜನಪದ ಮನಸ್ಸು ಮಗ್ಗವಾಗಿ ನೇಯ್ದುಕೊಂಡದ್ದು ವಿಶೇಷವೆನಿಸಿತು. ನೀರು ಹೀರಿಕೊಳ್ಳುವ ಮೃದು ಸ್ಪಂಜಿನಂಥ ಅವರ ಮಾತು, ಊಟದಲ್ಲಿ ರಸವತ್ತಾಗಿ ಒದಗಿದ ಅವರ ಸಂಗಮಿತ್ರತ್ವ ನನಗೆ ರುಚಿಸುತ್ತ ಹೋಯಿತು.

ಸಮುದ್ರದಲ್ಲಿ ಸೂರ್ಯ ಕಂತುವ ಹೊತ್ತಿಗೆ ಬಣ್ಣದ ಮುಗಿಲಿನ ಮುಸ್ಸಂಜೆಯ ನಸುಗೆಂಪು ಹೊಳಪಿನ ತೀರದಲ್ಲಿ ನಮ್ಮ ಸ್ನೇಹ ಪುರಾತನವೆಂದೆನಿಸಿತು. ಪತ್ರಿಕೆಗಳಲ್ಲಿ ಪ್ರಕಟವಾದ ಕತೆಗಳ ಸಂಖ್ಯೆ ವಿಚಾರಿಸಿ, ಆನಂದಕಂದ ಗ್ರಂಥಮಾಲೆಯಿಂದ  ನಿಮ್ಮ ಕತೆಗಳನ್ನು ಪ್ರಕಟಿಸೋಣ ಎಂದರು. ಅವರ ಆತ್ಮೀಯ ಆಹ್ವಾನವನ್ನು ಅದೊಂದು ಗೌರವವೆಂದು ಸ್ವೀಕರಿಸಿ, ‘ನಮ್ಮ ಮನೆಗೆ ಬನ್ನಿ’ ಎಂದು ಕುಮಟಾಕ್ಕೆ ಕರೆದುಕೊಂಡು ಬಂದು ರಾತ್ರಿ ಉಳಿಸಿಕೊಂಡೆ. ನಡುರಾತ್ರಿವರೆಗೆ  ಆನಂದಕಂದರ ಬಗ್ಗೆ , ತಾನು ಬೆಳಗಾವಿಯಿಂದ ಚಿತ್ರದುರ್ಗ ಜಿಲ್ಲೆಗೆ ವಲಸೆ ಹೋಗಬೇಕಾಗಿ ಬಂದ ಪ್ರಸಂಗವನ್ನು, ಎಚ್.ಎಸ್.ವಿ.ಯವರ ಗಾಢ ನಂಟಿಗೆ ಕಾರಣವಾದದ್ದನ್ನು ವಿವರಿಸಿ ಮಲ್ಲಾಡಿಹಳ್ಳಿಯ ರಾಘವೇಂದ್ರ ಸ್ವಾಮಿಯವರನ್ನು ನೆನೆಯುತ್ತ ಮಾತಾಡಿದರು. ಮರುದಿನ ನನ್ನ ಕತೆಗಳ ಕಂತೆಯನ್ನು ಜೋಳಿಗೆಯಲ್ಲಿಟ್ಟು ಬಾಗಿಲಲ್ಲಿ ಬೀಳ್ಕೊಡುವಾಗ ಪುಸ್ತಕ ಬಿಡುಗಡೆ ನಿಮಿತ್ತವಾದರೂ ನೀವೆಲ್ಲ ಮಲ್ಲಾಡಿಹಳ್ಳಿಗೆ ಬರಬೇಕೆಂದು  ಆಮಂತ್ರಿಸಿದರು. ಅವರನ್ನು ನನ್ನ ಸ್ಕೂಟರಿನ ಹಿಂದೆ ಕೂರಿಸಿಕೊಂಡು ಬಸ್‌ಸ್ಟ್ಯಾಂಡಿಗೆ ತಲುಪಿಸಲು ಹೋದಾಗ ಮಾರ್ಗದ ನಡುವೆ ನಾಯಿಯೊಂದು ಆಕಸ್ಮಿಕವಾಗಿ ಅಡ್ಡಬಂದು ನಾವು ಅಪಘಾತದಿಂದ ಸ್ವಲ್ಪದರಲ್ಲಿ ಪಾರಾದ ಕ್ಷಣದ ಆತಂಕದ, ದಿಗಿಲಿನ ನೆನಪು ನನ್ನಂತೆ ಅವರಿಗೂ ಇದ್ದಿರಬಹುದು!

ಪಾಟೀಲರ ಸಂಕಲ್ಪದಂತೆ ಆ ವರ್ಷ ಪುಸ್ತಕ ಬಿಡುಗಡೆ ಸಮಾರಂಭ ಮಲ್ಲಾಡಿಹಳ್ಳಿಯಲ್ಲಿ ಜರುಗಲಿಲ್ಲ. ಕುಮಟಾದಲ್ಲಿ ಏರ್ಪಾಡಾಯಿತು. ನನ್ನ ಕಥಾ ಸಂಕಲನದೊಂದಿಗೆ ಇನ್ನೂ ಮೂರು ಕೃತಿಗಳ ಲೋಕಾರ್ಪಣೆ ಆಗುವುದಿತ್ತು. ಬಿಡುಗಡೆಯ ಮುಂಚಿನ ದಿನ ಪಾಟೀಲರ ಸಾಹಿತ್ಯ ಪರಿವಾರದವರ ಆಗಮನದ ನಿರೀಕ್ಷೆಯಿತ್ತು. ಎಚ್. ಎಸ್. ವೆಂಕಟೇಶಮೂರ್ತಿಯವರ ಮತ್ತು ಪಾಟೀಲರ ದಂಪತಿಗಳು ಮೊದಲಿಗೆ ಬಂದರು. ಆಮೇಲೆ ತಡ ರಾತ್ರಿವೇಳೆ ಮಲ್ಲಿಕಾರ್ಜುನ ಹಿರೇಮಠ, ಬಾಳಾಸಾಹೇಬ ಲೋಕಾಪುರ, ಚಂದ್ರಶೇಖರ ತಾಳ್ಯ, ವೀಣಾ ಬನ್ನಂಜೆ, ವಿಜಯೇಂದ್ರ ಪಾಟೀಲ ಮುಂತಾದವರು ಬಂದು ಸೇರಿಕೊಂಡರು.' ಪಾಟೀಲರ ಮೇಲಿನ ಕೇವಲ ಅಭಿಮಾನ ಮತ್ತು ಪ್ರೀತಿಯಿಂದ ಮಾತ್ರ ಅಷ್ಟು ದೂರದೂರುಗಳಿಂದ ಬರಲು ಸಾಧ್ಯವೆಂದು ನನಗನಿಸಿತು.ಬೆಳಿಗ್ಗೆ ನಮ್ಮ ಕಾಲೇಜಿನಲ್ಲಿ ಹಮ್ಮಿಕೊಂಡ ಸಾಹಿತ್ಯ ಸಂವಾದ ಕಾರ್ಯಕ್ರಮದಲ್ಲಿ ಎಚ್.ಎಸ್.ವಿಯವರು ಕನ್ನಡದಲ್ಲಿ ಕಾವ್ಯ ಆಶ್ರಯಿಸಿದ ಹಲವು ನೆಲೆಗಳ ಮತ್ತು ಆಮೂಲಕ ಅದರ ಸ್ವರೂಪದಲ್ಲಿ ಉಂಟಾದ ಗುಣಾತ್ಮಕ ಬದಲಾವಣೆ ಕುರಿತು ವಿವರಿಸಿದರು. ಪಾಟೀಲರು ‘ತುದಿಯೆಂಬೋ ತುದಿಯಿಲ್ಲ’ ಎಂಬ ಕತೆಯನ್ನು ವಾಚಿಸಿದರು. ಕತೆ ನಿರೂಪಣೆಯಾದ ಸಮುದಾಯದ ಆಡುಮಾತಿನ ನೈಜ ಲಯ ಹಿಡಿದು ಅವರು ವಾಚಿಸಿದಾಗ ಡೊಂಕು–ಬಳುಕಿನ, ದಪ್ಪ_ದುಂಡಗಿನ ನಾದೋಚ್ಚಾರಣೆಯಲ್ಲಿ ಅನುನಾಸಿಕ ಗೋಕಾಂವಿಯ ಮಣ್ಣು–ಮನುಷ್ಯರ ಯಥಾವತ್ ಲೋಕ ನಮ್ಮ ಕಿವಿಯಲ್ಲಿ ಮರುಪ್ರಸಾರವಾಗಿ, ನಮ್ಮ ಪಾಡಿಗೆ ನಾವು ಮೌನವಾಗಿ ಒದಿದಾಗ ಆದ ಅನುಭವಕ್ಕಿಂತ ಭಿನ್ನ ಅನುಭವವಾಯಿತು. ಓದುವಾಗ ಕತೆಯಲ್ಲಿ ನೋಡುವ ಕ್ರಿಯೆ ಇರುವಂತೆ ಸೂಕ್ಷ್ಮವಾಗಿ ಕೇಳುವ ಜಾಗ್ರತಾವಸ್ಥೆಯೂ ಇರುತ್ತದೆಯೆಂದು

ಪಾಟೀಲರು ಅಂದು ತೋರಿಸಿದರು. ಬಿಡುಗಡೆಯಾಗಲಿರುವ ಪುಸ್ತಕಗಳ ಪಾರ್ಸಲ್ ಮುಂಚಿನ ದಿನ ಬೆಂಗಳೂರಿನಿಂದ ಬರಲು ವಿಳಂಬವಾಗಿ ಪಾಟೀಲರು ತಳಮಳಿಸಿದರು. ರಾತ್ರಿ ನಮಗೆಲ್ಲ ನಿದ್ರೆ ಬರುವ ತನಕ ಎಚ್.ಎಸ್.ವಿಯವರು ತಮ್ಮ 'ಮೂವತ್ತು ಮಳೆಗಾಲ'ದಿಂದ ಆಯ್ದ ಕೆಲವು ಕವನಗಳನ್ನು ಓದಿ ವಿಶ್ಲೇಷಿಸಿದರು. ಅವರು ತೆರೆದ ಕಾವ್ಯಲೋಕ ನಮ್ಮನ್ನು ಮರಳುಗೊಳಿಸಿತ್ತು.ಮರುದಿನದ ಬಿಡುಗಡೆ ಸಮಾರಂಭ ತಾಳ ಮೇಳದ ಸಂಗೀತ ಗೋಷ್ಟಿಯಂತಿತ್ತು.

ಪಾಟೀಲರು ಹೊರ ಸಂಚಾರವನ್ನು ಒಬ್ಬರೇ ಕೈಗೊಂಡದ್ದನ್ನು ನಾನು ನೋಡಿದಂತಿಲ್ಲ. ಅವರ ಸಾಹಿತ್ಯ ಸಂತೆಯಲ್ಲಿ ಕುಟುಂಬದ ಸದಸ್ಯರು, ಆಪ್ತ ಗೆಳೆಯರು, ಬಹುಕಾಲದ ಒಡನಾಡಿಗಳು ಓಡಾಡುವುದನ್ನು ನಾನು ನೋಡಿದ್ದೇನೆ. ಅವರ ಈ ಅವಿಭಕ್ತ ಮನಸಿನ ಸಂಗಾತಿ ಗುಣ ಅವರ ಕಥನದ ಸಮುದಾಯ ಪ್ರಜ್ಞೆಯ ಸ್ವರೂಪವೂ ಹೌದು. ಎಲ್ಲರನ್ನೂ ಸಮ ಭಾವದಲ್ಲಿ ಗೌರವದಿಂದ ಸ್ವೀಕರಿಸುವ ಕುಟುಂಬದ ಘನವಂತ ಯಜಮಾನನಿದ್ದ'ಂತೆ ಅವರು. ಸಮುದಾಯದ ತಾದಾತ್ಮ್ಯತೆಯೊಂದಿಗೆ ಸಮಚಿತ್ತದಿಂದ ನಿರಹಂಕಾರದಿಂದ ಬರೆಯುವ ಅವರು ಸಂಯುಕ್ತ ಸಂಸ್ಕೃತಿಯ ತಾತ್ವಿಕ ಪ್ರತೀಕ. ಅವರ ವೃತ್ತಿ ಜೀವನ ವಿಧಾನದಲ್ಲಿ, ಕಥನ ಕ್ರಮದಲ್ಲಿ ಸಮುದಾಯವನ್ನು ಕಾಪಾಡಲು ಅಗತ್ಯವಾದ ಹಾಡಿನೊಳಗಿನ ಅಲೌಕಿಕ ಒಗಟನಲ್ಲೊ ಅನುಭಾವಿಗಳ ಆಧ್ಯಾತ್ಮಿಕ ಹುಡುಕಾಟದಲ್ಲೊ ಅಸಾಧಾರಣ ಅದ್ವೈತದ ಎಳೆ ಇದೆ. ಇಂಥ ಸಮನ್ವಯ ಯೋಗದ ಅಪೂರ್ವ ಆಯಾಮದ ದರ್ಶನ ನನಗೆ ಮಲ್ಲಾಡಿಹಳ್ಳಿಯಲ್ಲಾಯಿತು.

ವಾರ್ಷಿಕ ಸಂಪ್ರದಾಯದಂತೆ ಮಲ್ಲಾಡಿಹಳ್ಳಿಯಲ್ಲಿ ಜರುಗುವ ನಾಟಕೋತ್ಸವಕ್ಕೆ ನನ್ನನ್ನು ಪಾಟೀಲರು ಆಹ್ವಾನಿಸಿದರು. ರಾಘವೇಂದ್ರ ಸ್ವಾಮಿಗಳ ಯೋಗಾಶ್ರಮದಿಂದಾಗಿ ಮಲ್ಲಾಡಿಹಳ್ಳಿ ಅದಾಗಲೆ ಕರ್ನಾಟಕದ ಭೂಪಟದಲ್ಲಿ ಗಮನ ಸೆಳೆದ ಊರಾಗಿತ್ತು. ನಾನು ಕೊನೆಯ ಬಸ್ಸಿಗೆ ಹೋಗಿ ಮಲ್ಲಾಡಿಹಳ್ಳಿ ತಲುಪುವಷ್ಟರಲ್ಲಿ ರಾತ್ರಿ ಮಧ್ಯಾಕಾಶಕ್ಕೆ ಏರಿತ್ತು. ರಸ್ತೆ ಬದಿಯ ಶೆಡ್ಡಿನಲ್ಲಿ ಬೂದು ಬೆಳದಿಂಗಳ ಮಬ್ಬಿನಲ್ಲಿ ನೆರಳಂತೆ ನಿಂತ ಪಾಟೀಲರು ಆತಂಕದಲ್ಲಿ ನನಗಾಗಿ ಕಾದು ದಣಿದಿದ್ದರು. "ಕೊನೆಯ ಶೆಟಲ್‌ನ್ನು ನೀವು ತಪ್ಪಿಸಿಕೊಂಡ್ರೆ ಏನಪ್ಪಾ ಅಂತ ನನಗೆ ಚಿಂತೆಯಾಗಿತ್ತು" ಎಂದು ನಿರಾಳ ನಕ್ಕು ಬರಮಾಡಿಕೊಂಡರು. ಪುಟ್ಟ ಬಯಲು ಪೇಟೆಯ ಬೀದಿಯನ್ನು ದಾಟಿ ಅವರ 'ಬಲರಾಮ' ಮನೆ ತಲುಪಿದಾಗ ಅಲ್ಲಿ ಅವರ ಗೆಳೆಯರು, ನೆಂಟರಿಷ್ಟರು ಬಂದಿಳಿದಿದ್ದರು. ಊರ ಜಾತ್ರೆ ತೇರಿನ ಕೋಲಾಹಲ, ಹಬ್ಬದೂಟದ ಸಂಭ್ರಮ ಅಲ್ಲಿ ಆವಾಹನೆಯಾಗಿತ್ತು. ಪಾಟೀಲರು ಮದುವೆ ದಿಬ್ಬಣದ ಸಡಗರದಲ್ಲಿದ್ದಂತೆ ಆವೇಶಗೊಂಡಿದ್ದರು. ಉಳಿದವರ ಊಟ ಮುಗಿದಿತ್ತು. ಪಾಟೀಲರು ನನಗಾಗಿ ಕಾದು ಕುಳಿತಿದ್ದರು. ಮರುದಿನ ಕ್ಯಾಂಪಸ್ ಸುತ್ತಾಡಿಸುತ್ತ, ರಾಘವೇಂದ್ರ ಸ್ವಾಮಿಗಳ ಅವಧೂತತನದ ಬಗ್ಗೆ ವಿವರಿಸುತ್ತ ನನಗೆ ಬೇಕಾಗಿದ್ದ ಎರಡು ಪುಸ್ತಕಗಳನ್ನು ಅವರ ಕಾಲೇಜಿನ ಗ್ರಂಥಾಲಯದಿಂದ ತೆಗೆಯಿಸಿ ಕೊಟ್ಟರು.

ಸಂಜೆ 'ತಿರುಕ ರಂಗ'ದವರಿಂದ ನಾಟಕ ಪ್ರಯೋಗವಿತ್ತು. ಪಾಟೀಲರ ಸಾರಥ್ಯದಲ್ಲಿ ಈ ರಂಗಮೇಳ ಮಲ್ಲಾಡಿಹಳ್ಳಿ ಸ್ವಾಮಿಗಳ ದಿವ್ಯ ಸ್ಮರಣೆಯ ಹೆಸರಿನಲ್ಲಿ ಅಸ್ತಿತ್ವಕ್ಕೆ ಬಂದಿತ್ತು. ಉದ್ದುದ್ದ ರತ್ನಗಂಬಳಿ ನೆರಳಿನ ಮುಸ್ಸಂಜೆ ಹಾಸಿಕೊಳ್ಳುತ್ತಿರುವ ಮೈದಾನದಲ್ಲಿ ಊರ ಹೆಂಗಸರು, ಮಕ್ಕಳು ಬಲು ಉತ್ಸಾಹದಿಂದ ಜಮಾಯಿಸತೊಡಗಿದರು. ಬಯಲು ರಂಗ ಮಂಟಪದ ಮೇಲೆ ಹವ್ಯಾಸಿ ನಾಟಕದ ವಾಸ್ತು ವಿನ್ಯಾಸವಿತ್ತು. ಎದುರಲ್ಲಿ ಕೊರಳಗೆಜ್ಜೆ, ಬಣ್ಣದ ರಿಬ್ಬನ್ ಗೊಂಡೆಯಿಂದ ಶೃಂಗಾರಗೊಂಡ ಕೋಡುಗಳ ಜೋಡೆತ್ತಿನ ಗಾಡಿಗಳ ಸವಾರಿ ಮೇಲೆ ಬಂದಿಳಿದ ರುಮಾಲು ಸುತ್ತಿದ ಮುದುಕರು, ಚೌಕಡಿ ಸೀರೆಯ ಸೆರಗು ಹೊದ್ದ ನಾಣ್ಯದಗಲದ ಕುಂಕುಮದ ಮುತ್ತೈದೆಯರು ಕಂಪ್ನಿ ನಾಟಕದ ಕಂಪಿನಭಿರುಚಿಯ ಪ್ರೇಕ್ಷಕರಾಗಿದ್ದರು. ಬಂದವರಿಗೆ ಪಕ್ಕದ ಹಜಾರದಲ್ಲಿ ಚಹಾ–ತಿಂಡಿ–ಊಟದ ಅರವಟ್ಟಿಗೆ ಉಪಚಾರವಿತ್ತು. ಕಾಲೇಜಿನ ಆವಾರದಲ್ಲಿ ಅರೆಕ್ಷಣದಲ್ಲಿ ಬಲೂನು, ನವಿಲು ಗರಿ ಚುಚ್ಚಿಕೊಂಡ ಕೊಳಲು ಗುಚ್ಛದ ಹುಡುಗ, ದೂಡು ಸೈಕಲ್ ಗಾಡಿಯ ಮರಳಿನ ಮೇಲೆ ಕೆಂಡದೊಲೆಯ ಬಾಣಲೆಯಲ್ಲಿ ಶೇಂಗಾ ಹುರಿದು ಕೊಡುವ ಮುದುಕ,

ಪೀಪಿ ಊದುವ ಪುಟಾಣಿಗಳು ಪ್ರತ್ಯಕ್ಷರಾದರು. ಸಂಜೆ ಉತ್ಸವದ ವೇದಿಕೆಯಲ್ಲಿ ಚಿತ್ರದುರ್ಗದಿಂದ ಬಂದಿದ್ದ ಜಿಲ್ಲಾ ಪಂಚಾಯತದ ಅಧ್ಯಕ್ಷರೂ ಸಾಹಿತ್ಯಾಭಿಮಾನಿಗಳೂ ಕೆಲವು ರಂಗ ಕರ್ಮಿಗಳೂ ಹಾಜರಿದ್ದರು. ಶೆಡ್ಡಿನಂಗಡಿಯಲ್ಲಿ ಮಿರ್ಚಿ ತಿನ್ನುತ್ತ ಬಲ ಭಾಗದ ಧೋತ್ರದ ಚುಂಗಿನ ತುದಿಯನ್ನೆತ್ತಿ ಹಿಡಿದು ಚುಟ್ಟಾ ಸೇದುವ ಅಪ್ಪಟ ಗ್ರಾಮ್ಯ ಸಂವೇದನೆಯ ರಸಿಕ ಪ್ರೇಕ್ಷರ ಸಮೂಹ ನೋಡಿ ಅವರ ಉಪಸ್ಥಿತಿಗೆ ಮಲ್ಲಾಡಿಹಳ್ಳಿಯ ಸ್ವಾಮಿಗಳ ಮೇಲಿನ ಭಕ್ತಿಯೊ ನಾಟಕಾಭಿರುಚಿಯೊ ಕಾರಣವಿರಬೇಕೆಂದು ಯೋಚಿಸುತ್ತ ದಂಗಾದೆ. ಗ್ರಾಮ–ನಗರ, ಹವ್ಯಾಸಿ–ವೃತ್ತಿ ರಂಗಭೂಮಿ, ಮನರಂಜನೆ–ಗಂಭೀರ ಚಿಂತನೆ ಮೇಳೈಸುತ್ತ ಹೊಸ ಪರಂಪರೆಯೊಂದು ಹುಟ್ಟುವ ಎಲ್ಲ ಲಕ್ಷಣಗಳು ನನಗೆ ಗೋಚರಿಸಿದವು. ಸ್ಥಳೀಯ ಜಾನಪದ ವಾದ್ಯಗಳೊಂದಿಗೆ ಆರಂಭವಾದ ಸಾಂಪ್ರದಾಯಕ ಹಾಡಿನ ನಂತರ ಹೊಸ ಅಲೆಯ ನಾಟಕ–ನನಗೆ ನೆನಪಿದ್ದಂತೆ ಪಾಟೀಲರ 'ಲಯ'– ರಂಗ ನಿರ್ದೇಶಕ ಕೃಷ್ಣಮೂರ್ತಿ ಕವತ್ತಾರ ನಿರ್ದೇಶನದಲ್ಲಿ ಪ್ರದರ್ಶನಗೊಂಡಿತು. ಜನಪ್ರಿಯ ಪರಿಚಿತ ವೃತ್ತಿ ರಂಗದ ಭಾಷೆಯನ್ನು ಬಲ್ಲ ಪ್ರೇಕ್ಷಕರನ್ನು ನಿಧಾನವಾಗಿ ಹವ್ಯಾಸಿ ನಾಟಕ ಪ್ರಯೋಗದ ಪ್ರವೇಶಕ್ಕೆ ಸಿದ್ಧಗೊಳಿಸುವ ಉದ್ದೇಶ ಅಲ್ಲಿ ತಾನೆ ತಾನಾಗಿ ಫಲಿಸುವಂತೆ ನನಗೆ ಅನಿಸಿತು. ಗೂಗಿಕೊಳ್ಳದ ಲಂಗಟ ಸ್ವಾಮಿಗಳ ಗೋಕಾಂವಿ, ಯೋಗಾಶ್ರಮದ ಸ್ವಾಮಿಗಳ ಮಲ್ಲಾಡಿಹಳ್ಳಿಯ ಸಾತ್ವಿಕ ಸಮುದಾಯ ತನ್ನ ಸುಪ್ತ ಪ್ರಜ್ಞೆಯ ಹಾಡು–ಕತೆಗಳಲ್ಲಿ ಹುಡುಕುತ್ತಿರುವ 'ಅನುಭಾವಿ ಲಯ' ನನ್ನನ್ನು ಆವರಿಸಿತು.

ಆನಂದಕಂದ ಗ್ರಂಥ ಮಾಲೆಯಿಂದ ಪ್ರಕಟವಾದ ಪುಸ್ತಕಗಳನ್ನು ಪ್ರತಿ ವರ್ಷ ಬೇರೆಬೇರೆ ಊರುಗಳಲ್ಲಿ ಬಿಡುಗಡೆ ಮಾಡುವ ಸಂಪ್ರದಾಯವನ್ನು ಪಾಟೀಲರು ಆರಂಭಿಸಿದರು. ಸಾಹಿತ್ಯ ಕೃತಿಗಳ ಮುದ್ರಣ–ಪ್ರಕಾಶನ ಕಾರ್ಯ ಏಕ ವ್ಯಕ್ತಿ ಪ್ರದರ್ಶನವಾಗದೆ ಕನ್ನಡ ಜನಮನದ ವಿಕೇಂದ್ರಿಕ್ರತ ಸಾವಯವ ಜೀವ ಸೇತುವೆಯಾಗಿ ನಿರ್ಮಾಣವಾಗುವ ರಾಜ ಮಾರ್ಗದ ಮೇಲೆ, ಕಾಲ್ದಾರಿ ಗುಂಟ ನಡೆದು ಬಂದ ಓದುಗರು, ಲೇಖಕರು, ವಿಮರ್ಶಕರು ಸೇರಿ ಸಹ ಒಡನಾಡಿಗಳಾಗಿ ಸಂವಹನ ಜರುಗಿಸುವ, ಚಿಂತನೆಯ ಚೈತನ್ಯದ ಕಂಪನವನ್ನುಂಟು ಮಾಡುವ, ಕಂಪಿನ ಯಾತ್ರೆಯಾಗಿದೆ ಅವರಿಗೆ. ಅಕ್ಷರದಲೆದಾಟದ ಮುಂದುವರಿಕೆಯಾಗಿ ಗೋಕರ್ಣದಲ್ಲಿ ಜರುಗಿದ ಗ್ರಂಥಮಾಲೆಯ ಪುಸ್ತಕ ಬಿಡುಗಡೆ ಕಾರ್ಯಕ್ರಮ ನಮಗೆಲ್ಲಾ ಸಾಹಿತ್ಯ ಚರಿತ್ರೆಯ ಪುಣ್ಯ ಪರಿಷೆಯಂತಿತ್ತು. ಓ. ಎಲ್. ನಾಗಭೂಷಣ ಸ್ವಾಮಿ, ರಾಜಾರಾಮ ಹೆಗಡೆ, ಪಾಟೀಲರು ಮತ್ತು ನಾನು ಕಥನದ ಕೋಟಿತೀರ್ಥದಲ್ಲಿ ಮಿಂದಿದ್ದೆವು. ಸ್ಥಳೀಯರನ್ನು, ಹೊರ ಊರಿನವರನ್ನು, ಹಳೆ ಹೊಸ ತಲೆಮಾರಿನವರನ್ನು ಮುಖಾಮುಖಿಯಾಗಿಸುವ, ಬೆಸೆಯುವ ಆ ಮೂಲಕ ಸಂವಾದಕ್ಕೆ ಕಾರಣವಾಗುವ ಮಾತುಕತೆಯ ಸಂದರ್ಭವನ್ನು ಪಾಟೀಲರು ಯಾವೊತ್ತೂ ಬಿಟ್ಟುಕೊಡುತ್ತಿರಲಿಲ್ಲ. ಗೋಕರ್ಣದ ರಥ ಬೀದಿಯುದ್ದಕ್ಕೂ ವೈದಿಕ ನೆರಳಲ್ಲಿ ಹಾಸಿರುವ ದೈವ ಶ್ರದ್ಧೆಯ ವಿವಿಧ ರೀತಿಯ ಆಸ್ತಿಕ ಭಂಗಿಗಳ ಧಾವಂತ ಮತ್ತು ಸಮುದ್ರ ತೀರದ ಗೌರೀಶ್ ಕಾಯ್ಕಿಣಿಯವರ ನಾಸ್ತಿಕ ವಿಚಾರವಾದದ ಮೌನ ಪರಸ್ಪರ ವಿರುದ್ಧ ಧ್ರುವಗಳಲ್ಲಿದ್ದೂ ಅನ್ಯೋನವಾಗಿ ಬಾಳಿದ ಸಾಂಸ್ಕೃತಿಕ ವಿಧಾನ ಪಾಟೀಲರ ಸಮಷ್ಟಿ ಪ್ರಜ್ಞೆಯ ವಿನ್ಯಾಸಕ್ಕೆ ಅನುರೂಪವಾದ ರೂಪಕ ವಿಲಾಸವೆಂದು ನನಗನಿಸಿತು.

ಎರಡು ವರ್ಷಗಳ ಹಿಂದೆ ಮಂಚಿಕೇರಿಯಲ್ಲಿ ಜರುಗಿದ್ದ ಸಾಹಿತ್ಯ ಗೋಷ್ಠಿಯಲ್ಲಿ ಎರಡು ದಿನ ನಿರಂತರ ಪಾಟೀಲರು ನಮ್ಮೊಂದಿಗಿದ್ದರು. ಕೀ. ರಂ. ನಾಗರಾಜರು ನಮ್ಮ ಜತೆಗಿದ್ದದ್ದು ವಿಶೇಷವಾಗಿತ್ತು. ಯಲ್ಲಾಪುರದ ಐ.ಬಿ.ಯಲ್ಲಿ ನಮಗೆ ವಸತಿ ವ್ಯವಸ್ಥೆಯಾಗಿತ್ತು. ಮುಂಚಿನ ದಿನ ಕೀ. ರಂ. ಮಧ್ಯ ರಾತ್ರಿವರೆಗೆ ಬೇಂದ್ರೆಯವರ ಕಾವ್ಯದಲ್ಲಿ ಕನಸಿನ ಅವತಾರದ ಕುರಿತು ಮಾತಾಡಿದ್ದರು. ಮರು ದಿನ ಕ್ಯಾಂಟೀನಿಗೆ ನಾವೆಲ್ಲ ಉಪಹಾರಕ್ಕೆ ಹೋದೆವು. ಪಾಟೀಲರು ಅಪರೂಪಕ್ಕೆ ಹೊಟೆಲ್ಲಿಗೆ ಬಂದ ಮುಗ್ಧ ಮಗುವಿನಂತೆ ಮಲೆನಾಡಿನ ವಿಶೇಷ ತಿಂಡಿಯನ್ನು ಅನ್ವೇಷಿಸುತ್ತ 'ಹೊಸ ತಿಂಡಿ ಏನಿದೆ?' ಎಂದು ವಿಚಾರಿಸಿದರು. 'ನಮ್ಮ ಕ್ಯಾಂಟೀನ್ ಸ್ಪೇಷಲ್ ಮಿಸಳ ಬಾಜಿ ಮತ್ತು ಬನ್ಸ್, ಆದರೆ ಅದನ್ನು ಸಾಯಂಕಾಲ ಮಾಡ್ತೇವೆ' ಎಂದ ಮಾಣಿ'. 'ಮಿಸಳ

ತಯಾರಿ ಮಾಡಿಕೊಡೋದಕ್ಕೆ ಎಷ್ಟು ಹೊತ್ತು ಬೇಕಾಗಬಹುದಪ್ಪ?' ಪಾಟೀಲರು ವಿಚಾರಿಸಿದರು.'ಒಂದ್ ಹದಿನೈದು ನಿಮಿಷ' ಎಂದ. ಮಿಸಳ್ ಆರ್ಡರ್ ಮಾಡಿ ಕಾಯುತ್ತ ಕುಳಿತರು. ಅದಾಗಲೆ ಇಡ್ಲಿ ತಿಂದು ಮುಗಿಸಿದ ಕೀ. ರಂ. ತನಗೂ ಮಿಸಳ ಬೇಕೆಂದು ಉತ್ಸಾಹ ತೋರಿದರು. ಹೋಟೆಲಿನಲ್ಲಿ ತಯಾರಿಸಿಟ್ಟ ಎಲ್ಲ ತಿಂಡಿಯ ಅಂಗಾಂಶಗಳನ್ನು ಆಯ್ದು ಗಾಜಿನ ಭರಣಿಯಲ್ಲಿ ಶೇಖರಿಸಿಟ್ಟ ಕರಿದಿಟ್ಟ ಪದಾರ್ಥಗಳನ್ನು ಸೇರಿಸಿ, ಬಟಾಣಿ ತರಕಾರಿ ಸಾಂಬಾರನ್ನು ಮೇಲಿಂದ ಸುರುವಿ ಒಂದು ಕ್ರಮಬದ್ಧ ವಿಧಾನದಲ್ಲಿ ಅವೆಲ್ಲವುಗಳನ್ನು ರಸವತ್ತಾಗಿ ಕಲಸಿ ತಯಾರಿಸುವ ಮಿಸಳ್ ಸರಿಸುಮಾರಾಗಿ ಮಸಾಲೆ ಚಾಟ್‌ನಂತಿರುತ್ತದೆ. ಆದರೆ ಕಲಾತ್ಮಕವಾಗಿ ಬೆರೆಸಿದ ಜವಾರಿ ತಾಜಾತನದ ಪದಾರ್ಥಗಳಿಂದಾಗಿ ಪ್ಲೇಟಿನಲ್ಲಿ ಹೊಗೆಯಾಡುವ ಪರಿಮಳದ ಪಾಕಕ್ಕೆ ಹೊಸ ರುಚಿ ಪ್ರಾಪ್ತವಾಗುತ್ತಿತ್ತು. ಗೋಕಾಂವಿಯ ಯಾವುದೊ ಬೀದಿಯ ಹಳೆಯ ಹೊಟೆಲಿನಲ್ಲಿ ತಾನು ಬಾಲಕನಾಗಿದ್ದಾಗ ಊರ ಕೂಲಿಗಂಬಳಿಯವರ ಪಕ್ಕದಲ್ಲಿ ಕೂತು ಮಿಸಳನ್ನು ತಿಂದದ್ದನ್ನು ನೆನಪಿಸಿಕೊಂಡರು. ಹಲವು ವರ್ಣ ವಿನ್ಯಾಸಗಳ ಒಳ ನೇಯ್ಗೆಯ ಬೇಂದ್ರೆಯವರ ಕಾವ್ಯದ ರಾಚನಿಕ ಸ್ವರೂಪವನ್ನು ವರ್ಣಿಸಲು ಕೀ. ರಂ. ಅವರಿಗೆ ಇಷ್ಟವಾದ ಮಿಸಳ್ ಒಂದು ಪ್ರತಿಮೆಯಾಗಿ ದೊರಕಿತೆಂದು ಕಾಣುತ್ತದೆ. ಪಾಟೀಲರಿಗೂ ಚಪ್ಪರಿಸುತ್ತಿರುವ ಮಿಸಳ ರುಚಿಯಲ್ಲಿ ಅವರ ಪ್ರೀತಿಯ ಸಮುದಾಯದ ಸ್ಯಾಂಪಲ್ಲಿನ ಅನುಭವವಾಗಿರಬೇಕು.

ಸಾಹಿತ್ಯ ಬರವಣಿಗೆ, ಪುಸ್ತಕ ಪ್ರಕಟಣೆ, ಪತ್ರಿಕೆ ಪ್ರಕಾಶನ, ವಿಚಾರ ಗೋಷ್ಠಿ, ನಾಟಕೋತ್ಸವ ಎಲ್ಲವನ್ನೂ ಸಂವಾದದ ಒಂದೇ ಚಪ್ಪರದಡಿಯಲ್ಲಿ ಪಾಟೀಲರು ನಿರ್ವಹಿಸಬಲ್ಲರು. ವರೋಪಚಾರ ಮಂಟಪದಿಂದ ದಿಬ್ಬಣದವರ ಸಭೆಗೆ, ವಾಲಗದವರ ಚಾಪೆಯ ಮೂಲೆಯಿಂದ ಹೊಗೆ ಹಾರುವ ಊಟದ ಪಂಕ್ತಿಯವರೆಗೆ ಉಸ್ತುವಾರಿಯ ಉದ್ವೇಗದಲ್ಲಿ ಓಡಾಡುವ–ಮದುವೆ ಮನೆಯ ಯಜಮಾನನಂತೆ ಅವರು ಓಡಾಡಬಲ್ಲರು...ಹೆಂಗಂದರ ಒಟ್ಟು ಹಾಡಿನೊಳಗಿನ ಒಂದು ನುಡೀ ಇದ್ದಂಗ_.. ಕೊಳದೊಳಗ ಒಂದು ಮೀನ ಇದ್ದಂಗ.. ಮುಗಿಲೊಳಗಿನ ಚಿಕ್ಕಿ ಇದ್ದಂಗ.. ಅರಣ್ಯದೊಳಗಿನ ಗಿಡಾ ಉಸಿರಾಡಿಧಂಗ..

ಶ್ರೀಧರ ಬಳಗಾರ